**ಪತ್ರಿಕಾ ಪ್ರಕಟಣೆ**

**ರಾಜ್ಯ ಮಟ್ಟದ ಛಾಯಾಚಿತ್ರ ಸ್ಪರ್ಧೆಯ ವಿಜೇತರ ಘೋಷಣೆ**

ಬೆಂಗಳೂರು, ಮೇ 25 : ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ಕರ್ನಾಟಕವತಿಯಿಂದ ಸಾರ್ವತ್ರಿಕ ಚುನಾವಣೆ ಕರ್ನಾಟಕ ವಿಧಾನಸಭೆ 2023 ರ ಅಂಗವಾಗಿ ಮತದಾನದ ವಿಷಯ ಕುರಿತು ಮಾಧ್ಯಮಗಳಲ್ಲಿ ಕಾರ್ಯನಿವರ್ಹಿಸುತ್ತಿರುವ ಮತ್ತು ಹವ್ಯಾಸಿ ಪತ್ರಿಕಾ ಛಾಯಾಗ್ರಹಕರಿಗಾಗಿ ಹಮ್ಮಿಕೊಳ್ಳಲಾಗಿದ್ದ **ರಾಜ್ಯ ಮಟ್ಟದ ಛಾಯಾಚಿತ್ರ ಸ್ಪರ್ಧೆ**ಯ ವಿಜೇತರನ್ನು ಇಂದು ಘೋಷಿಸಲಾಗಿದೆ.

ಮೇ 10 ರಂದು ನಡೆದ ಮತದಾನದ ದಿನದ ವಿಷಯಗಳಿಗೆ ಸಂಬಂಧಿಸಿದಂತೆ ಸ್ಪರ್ಧೆಗೆ ಛಾಯಾಚಿತ್ರಗಳನ್ನು ಕಳುಹಿಸಲು ಮೇ 20 ಕೊನೆಯ ದಿನವಾಗಿತ್ತು. ಸ್ಪರ್ಧೆಯಲ್ಲಿ ರಾಜ್ಯದ ವಿವಿಧ ಮಾಧ್ಯಮಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 63 ಪತ್ರಿಕಾ ಛಾಯಾಗ್ರಾಹಕರು/ಹವ್ಯಾಸಿ ಛಾಯಾಗ್ರಹಕರು ಭಾಗವಹಿಸಿದ್ದರು. ಸೂಕ್ತ ಶೀರ್ಷಿಕೆಯೊಂದಿಗೆ 5 ಛಾಯಾಚಿತ್ರಗಳನ್ನು ಕಳುಹಿಸಲು ತಿಳಿಸಲಾಗಿತ್ತು. ಸ್ಪರ್ಧೆಯಲ್ಲಿ ಸಲ್ಲಿಕೆಯಾಗಿದ್ದ ಛಾಯಾಚಿತ್ರಗಳನ್ನು ಸೂಕ್ತ ಮಾರ್ಗಸೂಚಿಗಳನ್ವಯ ಕೂಲಂಕುಷವಾಗಿ ಪರಿಶೀಲಿಸಿ ಆಯ್ಕೆ ಮಾಡಲು ಆಯ್ಕೆ ಸಮಿತಿಯನ್ನು ರಚಿಸಲಾಗಿತ್ತು. ಇಂದು ನಡೆದ ಆಯ್ಕೆ ಸಮಿತಿ ಸಭೆಯಲ್ಲಿ ಉತ್ತಮ ಛಾಯಾಚಿತ್ರಗಳನ್ನು ಬಹುಮಾನಗಳಿಗೆ ಈ ಕೆಳಕಂಡಂತೆ ಶಿಫಾರಸ್ಸುಗಳನ್ನು ಮಾಡಿ ವಿಜೇತರನ್ನು ಘೋಷಿಸಲಾಗಿದೆ.

## ಬಹುಮಾನಗಳ ವಿವರ:

| ಕ್ರ.ಸಂ | ಬಹುಮಾನ | ವಿಜೇತರು | ಮೊತ್ತ ರೂ.ಗಳಲ್ಲಿ |
|---|---|---|---|
| 1 | ಪ್ರಥಮ ಬಹುಮಾನ | ತಾಜುದ್ದೀನ್ ಆಜಾದ್, ಹಿರಿಯ ಛಾಯಾಗ್ರಾಹಕರು ಪ್ರಜಾವಾಣಿ, ಕಲ್ಬುರ್ಗಿ | 25,000/- |
| 2 | ದ್ವಿತೀಯ ಬಹುಮಾನ | ಇಂದ್ರಕುಮಾರ್ ದಸ್ತೇನವರ್ ಛಾಯಾಗ್ರಾಹಕರು, ಹಳ್ಳಿ ಸಂದೇಶ ಸುದ್ದಿಪತ್ರಿಕೆ, ಬಾಗಲಕೋಟೆ | 15,000/- |
| 3 | ತೃತೀಯ ಬಹುಮಾನ | ಫಕ್ರುದ್ದೀನ್. ಹೆಚ್ ಛಾಯಾಗ್ರಾಹಕರು ಪ್ರಜಾವಾಣಿ/ಡೆಕ್ಕನ್ ಹೆರಾಲ್ಡ್ ಮಂಗಳೂರು | 10,000/- |
| 4 | ಸಮಾಧಾನಕರ ಬಹುಮಾನ | 1. ಸುರೇಶ್.ಪಿ. ಹಿರಿಯ ಛಾಯಾಗ್ರಾಹಕರು, ಕನ್ನಡಪ್ರಭ, ಬೆಂಗಳೂರು<br>2. ಎನ್.ನರಸಿಂಹಮೂರ್ತಿ, ಛಾಯಾಗ್ರಾಹಕರು, ದಿ ಎಕನಾಮಿಕ್ ಟೈಮ್ಸ್, ಬೆಂಗಳೂರು | 3,000/-<br>3,000/- |
| 5 | ವಿಶೇಷ ಬಹುಮಾನ | ಕೆ.ವೆಂಕಟೇಶ್ , ಹವ್ಯಾಸಿ ಛಾಯಾಗ್ರಾಹಕರು, ಮಲ್ಲೇಶ್ವರಂ, ಬೆಂಗಳೂರು | 5,000/- |

ಲೋಕಸಭಾ ಚುನಾವಣೆ-2019ರಲ್ಲಿ ಸಹ ಇದೇ ರೀತಿ ಹಮ್ಮಿಕೊಳ್ಳಲಾಗಿದ್ದ ರಾಜ್ಯ ಮಟ್ಟದ ಛಾಯಾಚಿತ್ರ ಸ್ಪರ್ಧೆಯಲ್ಲಿ ಆಯ್ಕೆಯಾದ ಛಾಯಾಚಿತ್ರಗಳು ಪ್ರಶಂಸೆಗೆ ಪಾತ್ರವಾಗಿತ್ತು. ಈ ಹಿನ್ನೆಲೆಯಲ್ಲಿ ಸಾರ್ವತ್ರಿಕ ಚುನಾವಣೆ ಕರ್ನಾಟಕ ವಿಧಾನಸಭೆ 2023 ನಿಮಿತ್ತ ರಾಜ್ಯ ಮಟ್ಟದ ಛಾಯಾಚಿತ್ರ ಸ್ಪರ್ಧೆಯನ್ನು ಏರ್ಪಡಿಸಲಾಗಿದ್ದು, ಶೀಘ್ರದಲ್ಲಿಯೇ ಅತ್ಯುತ್ತಮ ಛಾಯಾಚಿತ್ರ ಪ್ರಶಸ್ತಿಗಳಿಗೆ ಆಯ್ಕೆಯಾದ ಛಾಯಾಗ್ರಾಹಕರಿಗೆ ಪ್ರಮಾಣ ಪತ್ರ ಹಾಗೂ ನಗದು ಬಹುಮಾನವನ್ನು ನೀಡಲಾಗುವುದು ಎಂದು ಮುಖ್ಯ ಚುನಾವಣಾಧಿಕಾರಿಗಳು ಕರ್ನಾಟಕ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

****